ಮೇಲೆ ಕನ್ನಡದ ಧ್ವಜ ಆಗಲೀ ಬೇರೆ ಪಕ್ಷದ ಧ್ವಜ ಆಗಲಿ ಹಾಕಿಕೊಳ್ಳಲು ಅಧಿಕಾರ ಇದೆಯೇ ಎಂಬ ಸರ್ಕಾರದ ತೀರ್ಮಾನ ಮಾಡಬೇಕು. ಮಾಡಲಿಲ್ಲ ಎಂದರೆ ಎಲ್ಲಾ ಪುರಸಭೆಗಳ ಮೇಲೂ ಕೂಡ ತಮ್ಮ ಇಚ್ಛೆ ಬಂದ ಧ್ವಜಗಳನ್ನು ಹಾಕಿಕೊಳ್ಳಬಹುದು. ಈಗ ಕೇಂದ್ರದಲ್ಲಿ ಕೂಡ ಯಾವ ಧ್ವಜ ಹಾಕಬೇಕು ಎಂಬ ಬಗ್ಗೆ ಕಾನೂನು ಇರುವಾಗ ಅದು ನಮ್ಮ ಸರ್ಕಾರದಲ್ಲಿ ಇಲ್ಲವೇ ಈ ಪುಸ್ತಕ ತರಿಸಿಲ್ಲವೇ ಆ ಕಾನೂನಿನ ಬಗ್ಗೆ ಇವರಿಗೆ ಅರಿವು ಇಲ್ಲವೇ? ಮಾನ್ಯ ಸಂಸದೀಯ ಸಚಿವರಾದ ಮೊಯಿಲಿಯವರು ನಾಲ್ಕಾರು ಬಾರಿ ಈ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಕಾಯಿದೆ ತರುತ್ತೇವೆ ಎಂದು ಹೇಳಿದ್ದಾರೆ. ಎಲ್ಲಾ ಪುರಸಭೆಗಳು ಒಪ್ಪತಕ್ಕ ಒಂದು ಕಾಯಿದೆಯನ್ನು ತರುತ್ತೇವೆ ಎಂದು ನಾಲ್ಕಾರು ಬಾರಿ ಹೇಳಿದ್ದಾರೆ. ಮತ್ತೆ ಮತ್ತೆ ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಇದೇ ಒಂದು ಚಟ, ಬೆಳೆದರೆ ಬೇರೆ ಪುರಸಭೆಗಳ ಮೇಲೂ ಇಂತಹ ಪರಿಸ್ಥಿತಿ ಬರುತ್ತದೆ. ಅದಕ್ಕೆ ದಯವಿಟ್ಟು ಮುಂದಿನ ಸಭೆಯಲ್ಲಿಯಾದರೂ ಈ ಪ್ರಶ್ನೆಯನ್ನು ಬಗೆಹರಿಸಬೇಕು. ಇದಕ್ಕೆ ಒಂದು ಕಾಯಿದೆಯನ್ನು ತರಬೇಕು ಮತ್ತು ಕೇಂದ್ರದ ಕಾಯಿದೆಯನ್ನು ಪರಿಶೀಲನೆ ಮಾಡಲಿ; ಅದಕ್ಕೆ ನನ್ನ ಅಭ್ಯಂತರ ಇಲ್ಲ ಇದರ ಬಗ್ಗೆ ಕಾಯಿದೆಯನ್ನು ತರತಕ್ಕದ್ದರಲ್ಲಿ ತಾವು ಸ್ಪಷ್ಟ ನೀತಿಯನ್ನು ಅನುಸರಿಸಬೇಕು ಎಂಬುದೇ ನನ್ನ ವಾದ...

ಶಾಸನ ರಚನೆ

1990ನೇ ಇಸವಿಯ ಕರ್ನಾಟಕ ರಾಜ್ಯದ ನಾಗರೀಕ ಸೇವೆಗಳ (ನಿರಸನ) ವಿಧೇಯಕ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಶ್ರೀ ಎಸ್.ಹೆಚ್. ಕೌಜಲಗಿ: ಮಾನ್ಯ ಅಧ್ಯಕ್ಷರೇ... ಇವ್ತೊತ್ತಿನ ದಿವಸ....

ಅಧ್ಯಕ್ಷರು: ಇದನ್ನು ಚರ್ಚೆ ಮಾಡಬೇಕಾಗಿದಯಾ ಕೌಜಲಗಿಯವರೇ....

† ಶ್ರೀ ಎಚ್.ಎಸ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೇ, ಒಂದು ನಿಮಿಷದಲ್ಲಿ ಹೇಳಿ ಬಿಡುತ್ತೇನೆ. ಇವ್ತೊತ್ತಿನ ದಿವಸ ಮಾನ್ಯಸಂಸಧಿಯ ವ್ಯವಹಾರ ಸಚಿವರು ಈ ಕರ್ನಾಟಕ ಸ್ಟೇಟ್ ಸಿವಿಲ್ ರೂಲ್ಸ್ ಅಮೆಂಡ್‌ಮೆಂಟ್ ಆನ್ನು ಡಿಲೀಟ್ ಮಾಡುವ ಸಲುವಾಗಿ ತಂದಂತಹ ಈ ಒಂದು ಆಕ್ಟ್ ಅನ್ನು ನಾನು ವಿರೋಧಿಸುತ್ತೇನೆ. ಮೊದಲನೆಯದಾಗಿ ಈ ಮೊದಲಿನ ಆಕ್ಟ್‌ಗೆ 12.7.85ನೇ ಇಸವಿಯಲ್ಲಿ ಮಾನ್ಯ ಪ್ರಸಿಡೆಂಟ್‌ರವರ ಅಸೆಂಟ್ ಸಿಕ್ಕಿತು. ಇದರ ಉದ್ದೇಶ ಏನು ಎಂದರೆ ನಮ್ಮ ಸಂವಿಧಾನದ ಆರ್ಟಿಕಲ್ 309ರ ಪ್ರಕಾರ ರಿಕ್ರೂಟ್‌ಮೆಂಟ್ ಮತ್ತು ಸರ್ವೀಸ್ ರೂಲ್ಸ್ ಅನ್ನು ಇದರಲ್ಲಿ ನಮೂದಿಸಲಾಗಿದೆ. ಇವ್ತೊತ್ತಿನ ದಿವಸ ಈ ಸಂವಿಧಾನದ ಕೆಳಗೆ ನಮ್ಮಲ್ಲಿ ಈ ಸರ್ವೀಸ್ ರೂಲ್ಸ್ ಯಾವ ಪ್ರಕಾರ ಇರಬೇಕು ಎನ್ನುವುದರ ಸಲುವಾಗಿ ಶ್ರೀಮಾನ್ ದೇವರಾಜ ಅರಸರು ಇದ್ದಾಗ ಈ ಆಕ್ಟ್‌ನ್ನು ಪಾಸ್ ಮಾಡಿದರು. ಆ ಕಾಲಕ್ಕೆ ಎರಡು ಸದನದವರು ವಿಚಾರಮಾಡಿದ ನಂತರ ರಾಷ್ಟ್ರಪತಿಗಳಿಗೆ ಕಳಿಸಿಕೊಟ್ಟು ರಾಷ್ಟ್ರಪತಿಗಳಿಂದ ಅಂಗೀಕಾರ ಪಡೆಯಲಾಗಿದೆ. ಈ ಆಕ್ಟ್ ಇರುವುದರಿಂದ ಸರ್ಕಾರಕ್ಕೆ ಯಾವರೀತಿ ತೊಂದರೆಯಾಗಲಿಕ್ಕೆ ಹತ್ತಿದೆ ಅಂದರೆ ಅದರಲ್ಲಿ ಯಾವುದಾದರೂ ಒಂದು ರೆಕ್ರೂಟ್‌ಮೆಂಟ್ ಮಾಡಬೇಕಾದರೆ ಭೇಗ ಮಾಡಲಿಕ್ಕೆ ಬರುವುದಿಲ್ಲ ಎರಡನೆಯದಾಗಿ, ಎಸ್.ಸಿ.ಎಸ್.ಟಿ ನವರಿಗೆ ಯಾವ ಪ್ರಕಾರ ಆಪಾಯಿಂಟ್ ಮಾಡಬೇಕು ಎಂದು ಎಸ್.ಸಿ.ಎಸ್.ಟಿ.ನವರಿಗೆ ಅನುಕೂಲವಾಗುವ ದೃಷ್ಟಿಯಿಂದ ಶ್ರೀಮಾನ್ ದೇವರಾಜ ಅರಸರು ಈ ಆಕ್ಟನ್ನು ತಂದಿದ್ದರು. ಇವತ್ತಿನದಿವಸ ಡಿ.ಪಿ.ಎ.ಆರ್.ರವರಿಗೆ ಅನುಕೂಲವಾಗದಿದ್ದ ಕಾರಣವೇ ಇದನ್ನು ಡಿಲೀಟ್ ಮಾಡಲಿಕ್ಕೆ ಹತ್ತಿದ್ದಾರೆ. ಇದು ಜರೂರಿಲ್ಲ ಎಂದು ಹೇಳಬಹುದಿತ್ತು. ಈ ಬಿಲ್‌ನಲ್ಲಿರುವ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಈ ರೀತಿ ಇದೆ:

12.50 ಪಿ.ಎಂ.

"It is considered necessary to repeal the Karnataka State Civil Services Act, 1990 as there are sufficient provisions in the

Constitution to regulate the recruitment and the conditions of service of persons appointed to services and posts in connection with the affairs of the State." ಇವತ್ತಿನದಿವಸ ತಾವು ನೋಡಬಹುದು. ನಮ್ಮ ಮೊದಲಿನ ಆಕ್ಟ್ ಸೆಕ್ಷನ್ 4-reservation for appointment. And the other is provision regarding disciplinary proceedings.

ಇದು ಯಾವುದು ಇದೆ, ಇದು ಯಾವುದೂ ಕಾಂಟ್ರವರ್ಷನ್ ಆಗುವುದಿಲ್ಲ. ಆದಕಾರಣ ಇದು ಜರೂರಿದೆ ಎಂದು ಈ ಆಕ್ಟನ್ನು ತಾವು ರಿಪೀಲ್ ಮಾಡಬಾರದು, ಮೊದಲು ಇದ್ದಂತೆ ಇರಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, 1978ರಲ್ಲಿ ಈ ಒಂದು ಮಸೂದೆ ಎರಡೂ ಸದನಗಳಲ್ಲಿ ಕೂಡ ಮೆಜಾರಿಟಿಗಾಗಿ ರಾಷ್ಟ್ರಾಧ್ಯಕ್ಷರ ಅಂಕಿತ ಪಡೆಯಿತು. ಆಮೇಲೆ ಅದರಲ್ಲಿ ಕೆಲವು ಲೋಪದೋಷಗಳು ಕಂಡುಬಂತು. ಅದು ಏನೆಂದರೆ, ಲೆಜಿಸ್ಲೇಚರ್ ಡಿಪಾರ್ಟ್‌ಮೆಂಟ್ ಮತ್ತು ಹೈಕೋರ್ಟ್‌ಗೆ ಸರ್ಕಾರದ ಸಾರ್ವಭೌಮ ಅಧಿಕಾರ ಕೂಡ ಇದಕ್ಕೂ ಅನ್ವಯಿಸುವುದರಿಂದ ಅದಕ್ಕೆ ಅನ್ವಯಿಸಲಿಕ್ಕೆ ಆಗುವುದಿಲ್ಲ ಎಂದು ಈ ಲೆಜಿಸ್ಲೇಚರ್ ಜೂರಿಸ್‌ಡಿಕ್ಷನ್ ಮತ್ತು ಹೈಕೋರ್ಟ್ ಜೂರಿಸ್‌ಡಿಕ್ಷನ್ ತೆಗೆಯಬೇಕು ಎಂದು ಹೇಳಿ to exclude it, an ordiance was also promulgated. ಈಗ ಆರ್ಡಿನೆನ್ಸ್ ಮತ್ತು ಈ ಮಸೂದೆ ಪಬ್ಲಿಷ್ ಆಗಿದೆ. ಪತನ್ಮಧ್ಯೆ ಈ ಆಡಳಿತಾಧಿಕಾರಿಗಳು ಮತ್ತು ಕಾನೂನು ಇಲಾಖೆಯವರು ಒಂದುರೀತಿ ಪುನಃ ಆಲೋಚನೆ ಮಾಡಿದರು. ಏಕೆಂದರೆ, ಆರ್ಟಿಕಲ್ 309 ಸಂವಿಧಾನದ ಪ್ರಕಾರ, 52ನೇ ಇಸವಿಯಿಂದ ಅದು ಡಿಸಿಪ್ಲಿನರಿ ವಿಚಾರ ಇರಬಹುದು, ಒಂದು ರೆಕ್ರೂಟ್‌ಮೆಂಟ್ ವಿಚಾರ ಇರಬಹುದು. ಮಿಸಲಾತಿ ವಿಚಾರ ಇರಬಹುದು; ಮಿಸಲಾತಿ ಅಂದರೆ ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಜಾತಿ, ಹಿಂದುಳಿದ ವರ್ಗದವರಿಗೂ ಮಿಸಲಾತಿ ನೀತಿಯನ್ನು ಅತ್ಯಂತ ಸಮರ್ಪಕವಾಗಿ ನೀಡಬೇಕು ಎಂದು ಸಂವಿಧಾನದ ಆರ್ಟಿಕಲ್ 309ರ ತಳಪದಿಯಲ್ಲಿ ನಾವು ನೋಟಿಫಿಕೇಷನ್ ಮಾಡಿ, ನಿಯಮಗಳನ್ನು ಮಾಡಿ ಸಂರಕ್ಷಣೆ ಮಾಡಲಿಕ್ಕೆ ಸಾಧ್ಯವಿದೆ. This has been contested in all courts and tribunals. ಈಗ ನಮ್ಮ ಆಲೋಚನೆ ಏನೆಂದರೆ, ಆರ್ಟಿಕಲ್ 309 ಅದರ ಬದಲಾಗಿ ಒಂದು ಕಾನೂನನ್ನೇ ತಂದರೆ it will be contested before the court again. ಏನು 40-45 ವರ್ಷಗಳಿಂದ ಅನುಷ್ಠಾನದಲ್ಲಿದೆ, ಯಾವುದೇ ರೀತಿಯ ಕಾನೂನಿನ ತಡೆ ಬರಲಿಲ್ಲ. ಇದು ಸಾಮಾಜಿಕ ದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ಪರಿಪೂರ್ಣವಾದಂಥ ಒಂದು ವ್ಯವಸ್ಥೆ ಎಂದು ಕಂಡುಬಂದಿದೆ. ಅದನ್ನು ಇವತ್ತು ಬದಲಾವಣೆ ಮಾಡಲಿಕ್ಕೆ ಹೋದರೆ ಮುಂದೆ ತೊಂದರೆಯಾಗುತ್ತದೆ ಎಂಬ ಭಾವನೆ ಅನೇಕ ಆಡಳಿತ ತಜ್ಞರಿಂದ ಮತ್ತು ಕಾನೂನು ತಜ್ಞರಿಂದ ಪುನಃ ಬಂದಿದ್ದರಿಂದ ಈ ರೀತಿಯ ಕಾನೂನು ಬೇಕಾಗಿಲ್ಲ; ಆರ್ಟಿಕಲ್ 309ರಲ್ಲೇ ಒಂದು ಸಾರ್ವಭೌಮ ಅಧಿಕಾರ ನಾವು ತೆಗೆದುಕೊಂಡು ನಾವು ಕಾರ್ಯಭಾರ ಮಾಡಬೇಕಾದಿದ್ದರೆ ಇಂತಹ ಅನಾವಶ್ಯಕವಾದಂಥ ಕಾನೂನನ್ನು ತರಬೇಕಾದಂಥ ಅಗತ್ಯವಿಲ್ಲ ಎನ್ನುವ ಒಂದು ಧೋರಣೆಯಿಂದ ನಾವು ಈಗ ರಿಪೀಲ್ ಮಾಡುತ್ತಾ ಇದ್ದೇವೆ. ಈ ಕಾನೂನು ಈಗ ಜಾರಿಯಲ್ಲಿಲ್ಲ. ಆರ್ಟಿಕಲ್ 309ರ ಪ್ರಕಾರ ಇವತ್ತು ಕಾರ್ಯನಿರ್ವಹಣೆ ಮಾಡುತ್ತಿದೆ. ಯಾವುದೇ ಮಿಸಲಾತಿ ನೀತಿಗೆ ಪ್ರಯೋಜನವಾಗಬೇಕೆಂದು ಈ ಮಸೂದೆ ಮಾಡಿದ್ದಲ್ಲ. ಹಿಂದಿನ ರೀಸನ್ಸ್ ಮತ್ತು ಆಬ್ಜೆಕ್ಟೀವ್ 1978ರ ಆಕ್ಟ್ ನೋಡಿದರೂ ಕೂಡ ಆ ಉದ್ದೇಶದಿಂದ ಮಾಡಿದ್ದಲ್ಲ. ಆರ್ಟಿಕಲ್ 309ರಲ್ಲಿ ಕಾನೂನು ಕೂಡ ಮಾಡಬಹುದು ಎನ್ನುವ ವ್ಯಾಕ್ಯೆ ಇದ್ದುದರಿಂದ ಕಾನೂನು ಮಾಡೋಣವೆಂದು ಹೊರಟಿದ್ದಾರೆಯೇ ಹೊರತು ಅದು ವ್ಯವಹಾರಿಕವಾಗಿ, ಆಡಳಿತಾತ್ಮಕವಾಗಿ, ಕಾನೂನು ದೃಷ್ಟಿಯಿಂದ ಕಾನೂನನ್ನು ಹೊಸದಾಗಿ ರಚನೆ ಮಾಡಿಕೊಂಡು ಇನ್ನೂ ಹೆಚ್ಚು, ತಮಗೆ ಗೊತ್ತಿದೆ ಅಧಿಕಾರಿ ವೃಂದ ಸಾಕಷ್ಟು ಒಂದು ರೀತಿಯ ಪಟ್ಟಭದ್ರ ಹಿತಾಸಕ್ತಿಗಳು ಕೆಲವು ಕಡೆ ಬೆಳೆಯತಕ್ಕ ಸಂದರ್ಭದಲ್ಲಿ ತಾವು ಕಾನೂನು ಮಾಡಿ, ಮತ್ತು ಈ ಆಡಳಿತ ಕ್ಷೇತ್ರದ ಕುತ್ತಿಗೆಯನ್ನೇ ಅದಕ್ಕೆ ಕೊಟ್ಟರೆ ಹೆಚ್ಚು

ತೊಂದರೆಯಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಆದ್ದರಿಂದ ಕಡಿಮೆ ಕಾನೂನು ಮಾಡಿದಷ್ಟೂ ಆಡಳಿತಕ್ಕೆ ಒಂದು ಸ್ವಾತಂತ್ರ ಮತ್ತು ಹೆಚ್ಚು ವ್ಯಾಪ್ತಿಯನ್ನು ವಿಸ್ತರಿಸಿಲಿಕ್ಕೆ ಆಗುತ್ತದೆ. ಈ ದಿಶೆಯಲ್ಲಿ ರಿಪೀಲ್ ಆಕ್ಟ್‌ನ್ನು ತಂದಿದ್ದೇವೆ.

† ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ:- ನನ್ನ ಒಂದನೇ ಪ್ರಶ್ನೆ 309ರ ಪ್ರಕಾರ ರಾಜ್ಯಾಂಗದಲ್ಲಿ ಅಧಿಕಾರ ಇದ್ದ ಮೇಲೆ, ಪುನಃ ಕಾನೂನು ತಂದು ಅದನ್ನು ಪಡೆದುಕೊಳ್ಳುವಂಥ ಅವಶ್ಯಕತೆ ಇಲ್ಲ ಎನ್ನುವುದು ಸರಿ. ರಾಜ್ಯಾಂಗದಲ್ಲಿ ಅಧಿಕಾರಿ ಕೊಟ್ಟ ಮೇಲೆ ಅವರ ಪ್ರಕಾರ ನಾವು ಪವರ್ಸ್ ತೆಗೆದುಕೊಳ್ಳುತ್ತೇವೆ ಮತ್ತು ಕಾನೂನುಗಳನ್ನು ಪಾಸ್ ಮಾಡಿಕೊಳ್ಳುತ್ತೇವೆ. ಈಗ ಉದಾಹರಣೆಗೆ ಆರ್ಟಿಕಲ್ 16(4) ಆಗಲಿ ಅಥವಾ 15 (4) ಆಗಲಿ ಅದರ ಕೆಳಗೆ ಮಾಡಬೇಕೆಂದು ರಾಜ್ಯಾಂಗದಲ್ಲಿದ್ದರೂ ಯಾರು ಕೂಡ ಮಾಡುವುದಿಲ್ಲವೆಂದು ನಾವು ಜಿ.ಓ. ಇಷ್ಟೂ ಮಾಡುತ್ತೇವೆ. ಇಲ್ಲವೆ ಕಾನೂನು ತರುತ್ತೇವೆ. ಆ ಕಾನೂನು ಪ್ರಕಾರ ನಡೆಯಬೇಕೆಂದು ಮಾಡುತ್ತೇವೆ. ಅದೇ ರೀತಿ 78ರಲ್ಲಿ ಇದನ್ನು ಯಾವ ಉದ್ದೇಶಕ್ಕಾಗಿ ತಂದರು ಎನ್ನುವುದು ವಿಚಾರ ಮಾಡುವುದು ಬಹಳ ಮಹತ್ವ ಇದೆ. For what purpose it has been brought? ಕಾನೂನಿನಲ್ಲಿ ಇರತಕ್ಕಂಥಾದ್ದು ಮ್ಯಾಂಡೇಟರಿ ಪ್ರಾವಿಷನ್ ಆಗುತ್ತದೆ. ಜಿ.ಓ. ನಲ್ಲಿ ಏನಾದರು ಸವಲತ್ತು ಕೊಟ್ಟರೆ ಅಂದರೆ ರಿಸರ್ವೇಷನ್ ಪಾಲಿಸಿ ಇರಬಹುದು, ಪ್ರೊಮೋಷನ್ ಪಾಲಿಸಿ ಇರಬಹುದು, ರೋಸ್ಟರ್ ಪಾಲಿಸಿ ಇರಬಹುದು, That can be withdrawn in course of time by another executive order. That can be replaced. ಆದರೆ ಕಾನೂನು ಇದ್ದರೆ, ಪುನಃ ಈ ಸದನಕ್ಕೆ ಬಂದು ರಿಪೀಲ್ ಆಗಬೇಕಾಗುತ್ತದೆ ಇಲ್ಲವೇ ಅಮೆಂಡ್‌ಮೆಂಟ್ ಆಗ ಬೇಕಾಗುತ್ತದೆ. ಆ ಅಧಿಕಾರ ಸದನಕ್ಕೆ ಇರುತ್ತದೆ. ಈಗ ಕಾನೂನಿನಲ್ಲಿರತಕ್ಕ ಹಕ್ಕುಗಳನ್ನು ನಾವೇ ತೆಗೆದುಕೊಂಡು ಬರೀ ಒಂದು ಎಕ್ಸಿಕ್ಯೂಟೀವ್ ಆರ್ಡರ್ ಮಾಡುತ್ತೇವೆಂದರೆ, ನಾಳೆ ನಿಮಗೆ ಪ್ರತಿಕೂಲ ಇರತಕ್ಕ ಸರ್ಕಾರ ಬಂದರೆ, ಅಥವಾ ರಿಸರ್ವೇಷನ್ ಪಾಲಿಸಿಗೆ ವಿರುದ್ಧ ಇರತಕ್ಕ ಸರ್ಕಾರ ಬಂದಿದೆ. ಒಂದೇ ದಿವಸದಲ್ಲಿ ಸುಪ್ರೋಮೋಟೋ ಒಂದೇ ದಿವಸದಲ್ಲಿ ಪ್ರೊಮೋಷನ್ ಆರ್ಡರ್ ವಿತ್‌ಡ್ರಾ ಮಾಡಿ ಕೊಳ್ಳಬಹುದು. ಅದಕ್ಕಾಗಿ ಮ್ಯಾಂಡೇಟರಿ ಪ್ರಾವಿಷನ್ ಇರತಕ್ಕಂಥಾದ್ದು, ಆಕ್ಟ್ ಇರತಕ್ಕದ್ದನ್ನು ತೆಗೆದು ಸರ್ಕಾರದ ಆರ್ಡರ್ ಮಾಡತಕ್ಕಂತದ್ದು ಸರಿಯೇ? ಹಿಂದೆ ಯಾವ ಉದ್ದೇಶಕ್ಕಾಗಿ ಮಾಡಿದ್ದರು, ಏನು ಆಬ್ಜೆಕ್ಟ್ ಇತ್ತು ಎಂದು ಸ್ಪಷ್ಟವಾಗಿ ಹೇಳಿದರೆ ನಮಗೂ ಕೂಡ ಗೊತ್ತಾಗುತ್ತದೆ. ರಾಜ್ಯಾಂಗದಲ್ಲಿ ಬಹಳಷ್ಟು ಪ್ರಾವಿಜನ್‌ಗಳಿವೆ. Whether all the States are going to implement? It is only Karnataka which is implementing certain Acts. ಈ ರೀತಿ ಎಲ್ಲರೂ ಮಾಡುತ್ತಿಲ್ಲ. ಯಾರುಯಾರಿಗೆ ಉದ್ದೇಶ ಇರುತ್ತೆ; ಆ ಉದ್ದೇಶದ ಪ್ರಕಾರ ಮಾಡುತ್ತಾರೆ. ದಯವಿಟ್ಟು ಇದರ ಬಗ್ಗೆ ಹೇಳಿದರೆ, ಒಂದು ಕ್ಲಾರಿಫೈ ಮಾಡಿದರೆ ನಮಗೆ ಕೂಡ ಗೊತ್ತಾಗುತ್ತದೆ. ಇಲ್ಲದೇ ಇದ್ದರೆ, ಇದರಿಂದ ತೊಂದರೆ ಆಗುವುದಿದ್ದರೆ, ಹಿಂದಿನಿಂದಲೂ ನಮಗೆ ಏನು ಹಕ್ಕುಗಳು ಸಿಕ್ಕಿದ್ದವು; ಅದನ್ನು ಈಗ ಗೌರ್ನಮೆಂಟ್ ಆರ್ಡರ್ ಮಾಡಿ, ಕಸಿದುಕೊಂಡರು ಎಂದು ಹೇಳುವಂತೆ ಆಗಬಾರದು. ಆದ್ದರಿಂದ ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ:- ನಮ್ಮ ಪ್ರೊಫೆಸರ್ ನಂಜುಂಡ ಸ್ವಾಮಿಯವರು, ನಮಗೆ ನಮ್ಮ ರಾಜ್ಯಾಂಗವೇ ಸಾಕು; ರಾಜ್ಯಾಂಗ ಬಿಟ್ಟು ಬೇರೇನೂ ಬೇಡ ಎಂದು ಹೇಳುತ್ತಾರೆ. ಆದರೆ ರಾಜ್ಯಾಂಗದ ಪ್ರಕಾರ ಅದರ ಕೆಳಗೆ ಕೆಲವು ರೂಲ್ಸ್ ಆಕ್ಟ್ ಮಾಡುತ್ತೇವೆ ಅದರಂತೆ ಹಿಂದೆ ದೇವರಾಜು ಅರಸು ಅವರು ಇದ್ದಾಗ 1975ರಲ್ಲಿ ಒಂದು ಆಕ್ಟ್ ಮಾಡಿದರು. ಏನೆಂದರೆ ಎಸ್ಸಿ ಮತ್ತು ಎಸ್‌ಟಿಗಳಿಗೆ ಹಾಗೂ ಹಿಂದುಳಿದವರಿಗೆ ಅನ್ಯಾಯವಾಗಬಾರದೆನ್ನುವ ದೃಷ್ಟಿಯಿಂದ ರಿಸರ್ವೇಷನ್ ಪಾಲಿಸಿ ತಂದರು.

Section 4 says:

"Reservation of appointments and post:

In all cases of recrutiment to public services, there shall be reservation of appointment or post to SCs, STs and other backward classes to such an extent in such a manner as may be determined from time to time by the State Government."

Here, the word used "shall". This we have to bear in mind. ಆದಕ್ಕಾಗಿ ನಾನು ಏನು ಹೇಳುತ್ತೇನೆಂದರೆ, ಈ ಬಿಲ್ ಅನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ರೂರಲ್):- ಮಾನ್ಯ ಅಧ್ಯಕ್ಷರೇ, ಆರ್ಟಿಕಲ್ 309ರ ಪ್ರಕಾರ ಕರ್ನಾಟಕ ಸ್ಟೇಟ್ ಸಿವಿಲ್ ಸರ್ವೀಸಸ್ ಆಕ್ಟ್ ಅನ್ನು ರಿಪೀಲ್ ಮಾಡುವುದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಒಂದು ಸ್ಪಷ್ಟೀಕರಣಬೇಕು, ಅದಕ್ಕೆ ಮುಂಚೆ ನಾನು ಆರ್ಟಿಕಲ್ 309 ಅನ್ನು ಓದುತ್ತೇನೆ

"Subject to the provisions of this Constitution, Acts of the appropriate Lgislature may regulate the recruitment and conditions of service of persons appointed, to public services and posts in connection with the affairs of the Union or of any State:

Provided that it shall be competent for the President or such person as he may direct in the case of services and posts in connection with the affairs of the Union and for the Governor of a State or such person as he may direct in the case of services and posts in connection with the affairs of the State, to make rules, regulating the recruitment, and the conditions of service of persons appointed to such services and posts until provision in that behalf made or under an Act of the appropriate Legislature under this Article and any rules so made."

ಇದನ್ನು ಏತಕ್ಕೆ ಓದಿದೆ ಅಂದರೆ ಇದರ ಕೆಳಗಿದೆ ತಾವು ಏನೂ ರೂಲ್ಸ್ ಅನ್ನು ಏನು ಮಾಡುತ್ತೀರಿ? ಕರ್ನಾಟಕ ಸ್ಟೇಟ್ ಸಿವಿಲ್ ಸರ್ವೀಸ್ ಆಕ್ಟ್ 1978 ಏನು ಇದೆ ಇವತ್ತು ರಿಪೀಲ್ ಮಾಡಬೇಕೆಂದು ಏನು ಮಂಡಿಸಿದ್ದೀರಿ; ಇದರ ಕೆಳಗಡೆ ಇರತಕ್ಕ ರೂಲ್ಸ್ ಏನು ಮಾಡುತ್ತೀರಿ? ಜೊತೆಗೆ ಆ ರೂಲ್ಸ್ ಅನ್ನು ನೀವು ರದ್ದು ಮಾಡುತ್ತೀರಾ? ಮಾಡುವುದಾದರೆ ಮುಂದೆ ಯಾವರೀತಿ ರೂಲ್ಸ್ ಅನ್ನು ಮಾಡಿಕೊಳ್ಳುತ್ತೀರಿ?

† ಶ್ರೀ ಬಿ.ಹೆಚ್. ಬನ್ನಿಕೊಡ್ (ಹಿರೇಕೆರೂರು):- ಮಾನ್ಯ ಅಧ್ಯಕ್ಷರೇ, ಈ ಕಾನೂನನ್ನು ರಿಪೀಲ್ ಮಾಡಲು ಈ ಸಭೆಯ ಮುಂದೆ ಒಂದು ತಿದ್ದುಪಡಿಯನ್ನು ತಂದಿದ್ದೀರಿ, ಈಗ ನಿರ್ದಿಷ್ಟವಾದ ಒಂದು ಕಾನೂನು ಇದೆ. ಯಾವರೀತಿ ಆಯ್ಕೆ ಮಾಡಬೇಕು, ಸಮಿತಿ ಯಾವರೀತಿ ಇರಬೇಕು, ಮಿಸಲಾತಿ ಯಾವರೀತಿ ಇರಬೇಕು ಎಂದು; ಸರ್ಕಾರ ಇದನ್ನು ತೆಗೆದುಹಾಕುವುದರ ರಿಪೀಲ್ ಮಾಡುವುದರ ಮೂಲಕ ತಾನೇ ಒಂದು ಸಂಪೂರ್ಣವಾದ ಅಧಿಕಾರವನ್ನು ತನಗೆ ಅನುಕೂಲವಾಗುವಂತೆ ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈಗ ರಿಪೀಲ್ ಮಾಡುವುದರಿಂದ ಸಂವಿಧಾನದ 309ರ ಪ್ರಕಾರ ಮಾಡಬಹುದೆಂದು ನಿದರ್ಶನ ಕೊಡುತ್ತಿದ್ದೀರಿ. ಅಲ್ಲಿ ವಿವರಗಳು ಇಲ್ಲ, ಯಾವ ರೀತಿಯ ಆಯ್ಕೆ ಮಾಡಬೇಕು, ಯಾವರೀತಿ ಶಿಫ್ಟಿನ ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಅಲ್ಲಿ ವಿವರಗಳು ಇಲ್ಲ. ರಾಜ್ಯ ಸರ್ಕಾರಗಳಿಗೆ ಈ ಒಂದು ನಿರ್ದೇಶನ ಕೊಟ್ಟಿದ್ದರೆ ಅದರ ಪ್ರಕಾರ ರೂಲ್ಸ್ ಮಾಡಬೇಕು. ಅದು ಇಲ್ಲದೆ ಹೋದರೆ ಸಂವಿಧಾನ 309ನೇ ಕಲಂ ಅನ್ನು ಉಪಯೋಗ ಮಾಡಿಕೊಂಡು ಅಧಿಕಾರದಲ್ಲಿರತಕ್ಕವರು ತಮಗೆ ಅನುಕೂಲ ಆಗುವಂತೆ ಮಿಸಲಾತಿಯನ್ನು ಇಡಬಹುದು, ಅಥವಾ ತೆಗೆಯಬಹುದು. ಅಂತಹ ಒಂದು ಪರಿಸ್ಥಿತಿ

ಉದ್ಭವವಾಗುತ್ತದೆ. ಇದು ದುರುಪಯೋಗವಾಗುತ್ತದೆ. ಆದ್ದರಿಂದ ಇದು ರಿಪೀಲ್ ಆಗಬಾರದು. ಇದರ ಬಗ್ಗೆ ಈ ಎರಡು ಸದನಗಳ ಒಂದು ಜಾಯಿಂಟ್ ಕಮಿಟಿಗೆ ಇದನ್ನು ಕಳುಹಿಸಿ ಅಲ್ಲಿ ಇದನ್ನು ಪರಿಶೀಲನೆ ಮಾಡಿ ಸರಿಯಾಗಿ ಚರ್ಚೆ ಮಾಡಿ ಆನಂತರ ಇದನ್ನು ಮಾಡಬೇಕೋ ಬೇಡವೋ ಎಂಬುದನ್ನು ನಿರ್ಧರಿಸಬೇಕು. ಇಲ್ಲವೇ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಸಿದ್ದಯ (ಸಂತೆಮಾರನಹಳ್ಳಿ):- ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು:- ತಾವು ಸ್ವಿಚ್ ಹಾಕಿಕೊಳ್ಳಿ

ಶ್ರೀ ಕೆ. ಸಿದ್ದಯ್ಯ:- ಆದ್ದರಿಂದ ಆ ಆಕ್ಟ್ ಇರಲಿ, 1978ನೇ ಇಸವಿಯ ಆಕ್ಟಿನ ಪ್ರಕಾರದಲ್ಲಿ ಅದರ ವ್ಯಾಪ್ತಿಯಲ್ಲೇ ನಾವು ಸರಿಯಾದ ರೀತಿಯಲ್ಲಿ ಈಗಿರುವ ರೂಲ್ಸ್ ಅನ್ನೇ ಅಳವಡಿಸುವುದರಿಂದ ಏನು ತಪ್ಪಿದೆ? ಒಂದು ವೇಳೆ ನ್ಯೂನತೆಗಳಿದ್ದರೆ ಆ ರೂಲ್ಸ್‌ನ ಮೂಲಕ ಇದನ್ನು ತಿದ್ದುಪಡಿ ಮಾಡಿಕೊಳ್ಳಲಿ ಮಾನ್ಯ ಸದಸ್ಯರಾದ ನಂಜುಂಡಸ್ವಾಮಿಯವರು ಹೇಳಿದ ರೀತಿ ಮುಖ್ಯವಾಗಿ ಸಂವಿಧಾನದ ನಿರ್ದೇಶನದ ಪ್ರಕಾರವಾಗಿ ಸೆಕ್ಷನ್ 309ರ ಪ್ರಕಾರ ಆಕ್ಟ್ ಇರಬೇಕು. ಅದರ ಉದ್ದೇಶವನ್ನು ಅನುಸರಿಸಿ ರೂಲ್ಸ್ ಅನ್ನು ಫ್ರೇಮ್ ಮಾಡುವುದು ಇದೆ. ಈಗ ಅದೇ ರೂಲ್ಸ್ ಇದ್ದ ಪಕ್ಷದಲ್ಲಿ ಆಕ್ಟ್ ಮಾಡುವುದರಿಂದ ಏನು ತಪ್ಪು? ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಸರಕಾರಕ್ಕೆ ಇದು ಆಗಾಗ್ಗೆ ತನಗೆ ಅನುಕೂಲಕ್ಕೆ ಬಂದ ರೀತಿಯಲ್ಲಿ ಬದಲಾವಣೆ ಮಾಡುವುದಕ್ಕೆ ತುಂಬಾ ಅವಕಾಶವಿರುತ್ತದೆ. ಆದ್ದರಿಂದ ಯಾವ ಜನರ ಕ್ಷೇಮಕ್ಕಾಗಿ – ಆಕ್ಟ್ ಅನ್ನು ತಂದಿದ್ದೇವೆ ಅದರ ಉದ್ದೇಶ ಪೂರ್ಣವಾಗಿ ನೆರವೇರದೆ ಆಗಾಗ್ಗೆ ಬದಲಾವಣೆಯಾಗಿ ಸಂದರ್ಭಾನುಸಾರ ಅವರಿಗೆ ತೊಂದರೆಯಾಗತಕ್ಕಂತಹ ಸನ್ನಿವೇಶ ಉಂಟಾಗಬಹುದು. ಆದ್ದರಿಂದ ಈ ಆಕ್ಟ್ ಇರಬೇಕು ಈಗಿರುವ ರೂಲ್ಸ್ ಅನ್ನು ತಿದ್ದುಪಡಿ ಮಾಡಿಕೊಳ್ಳಿ ಈ ಆಕ್ಟೇ ಇರಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ:- 309ರಲ್ಲಿ ಎರಡು ಅಲಟರ್‌ನೇಟೀವ್ ಇದೆ.

(i) Subject to the provisions of this Constitution, Acts of the appropriate legislatrue may regulate the recruitment & conditions ಅದರ ಕೆಳಗೆ ಅವರು ರೂಲ್ಸ್ ಅನ್ನು ಮಾಡಿಕೊಳ್ಳಬಹುದು ಅದನ್ನೇ ಈಗ ನಾವು ಮಾಡಿರುವುದು. ಸಿವಿಲ್ ಸರ್ವೀಸ್ ಆಕ್ಟ್ 1978ನ್ನು ನಾವು ಕಾನೂನು ಮಾಡಿ ಅದರ ಕೆಳಗೆ ರೂಲ್ಸ್ ಮಾಡಿಕೊಂಡು ಕೆಲಸ ಮಾಡುತ್ತಿದ್ದೇವೆ. ಈಗ ತಾವು ಹೇಳುತ್ತಿರುವುದು, ಈ ಆಕ್ಟ್ ಬೇರೆ, ಆರ್ಟಿಕಲ್ 309ರ ಒಳಗೆ ಕೆಲಸ ಮಾಡೋಣವೆಂದು ತಮ್ಮ ಉದ್ದೇಶ. ಆಂದರೆ ಈಗಿರುವ ರೂಲ್ಸ್ ಹೋಗುತ್ತದೆಯೇ? ಆ ಪ್ರಾವಿಸೋ ಒಳಗಡೆ ರೂಲ್ಸ್ ಮೇಕಿಂಗ್‌ಗೆ ಏನು ಪ್ರೊಸೀಜರ್ ಇದೆ, ಆ ಪ್ರೊಸೀಜರ್ ಅನ್ನು ತಾವು ಫಾಲೋಮಾಡುತ್ತೀರಾ? ಇದು ಸ್ಪಷ್ಟವಾಗಬೇಕು. ಏಕೆಂದರೆ It is useless to repeal an Act and Keep the rules under that Act, if you want to function under Article 309 of the Constitution.

ಶ್ರೀ ಎಂ. ವೀರಪ್ಪ ಮೊಯ್ಲಿ: ಮಾನ್ಯ ಅಧ್ಯಕ್ಷರೇ, ಬಹುಶಃ ಕೆಲವು ವಿಚಾರಗಳ ಬಗ್ಗೆ ಏನು ಸದಸ್ಯರು ಸ್ಪಷ್ಟೀಕರಣ ಕೇಳಿದ್ದಾರೆ, ಅದರ ಬಗ್ಗೆ ಸ್ಪಷ್ಟೀಕರಣ ಕೊಡಬಯಸುತ್ತೇನೆ. ಮಾನ್ಯ ಕೌಜಲಗಿಯವರು ಸೆಕ್ಷನ್ 4 ರ ಪ್ರಕಾರ ಏನು ವ್ಯಾಕುಲ ವ್ಯಕ್ತಪಡಿಸಿದ್ದಾರೆ ಅದಕ್ಕೆ ಇದರಿಂದ ಹೆಚ್ಚಿನ ತಡೆ ಬರುವುದಿಲ್ಲ. ಏಕೆಂದರೆ ಸಂವಿಧಾನದ ಪ್ರಕಾರ ಏನು ರಿಸರ್ವೇಷನ್ ಇದೆ, ಅದನ್ನು ಕೊಡಬೇಕಾಗುತ್ತದೆ. That is protected under Article 16 of the Constitution. There is nothing to be lightly looked into.

309ರಲ್ಲಿ ಯಾವುದೇ ಸರಕಾರ ಆಯಾಯ ಕಾಲಕ್ಕೆ ಕೊಡತಕ್ಕಂತಹ ಭಿಕ್ಷೆ ಅಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಕೊಡಲೇಬೇಕಾಗುತ್ತದೆ. It is guaranteed under the Constitution. Under Article 16, it has been given. ಆದರ ಪ್ರಕಾರ ಕೊಡಲಾಗಿದೆ. ಈ ಆಕ್ಟ್ ಬಂದರೂ ತಾವು ಹೇಳಿದ ಪ್ರಕಾರ ಎಕ್ಸಿಕ್ಯುಟೀವ್ ಆರ್ಡರ್‌ನಲ್ಲಿ ಇಲ್ಲ. ಆರ್ಟಿಕಲ್ 309ರಲ್ಲಿ ಮಾಡತಕ್ಕಂಥಾದ್ದು ಅಥವಾ ಹಿಂದೆ ಕೆ.ಸಿ.ಎಸ್.ಆರ್ ರೂಲ್ಸ್ ಅಥವಾ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ಮಾಡತಕ್ಕಂಥಾದ್ದು ಎಕ್ಸಿಕ್ಯುಟೀವ್ ಆರ್ಡರ್‌ನಲ್ಲಿ ಅಲ್ಲ. By means of Rules under Article 309 read with Article 16, the rights are guaranteed with regard to reservation. Article 16 will definitely look-after the reservation philosophy and reservation point of view. We have already framed the rules. What is governing the Recruitment and Discipline of the Employees is of the rules framed under the proviso of Article 309, those rules...

PROF. M.D. NANJUNDA SWAMY :- They are not rules under this 1978 Act.

SRI. M. VEERAPPA MOILY:- That act has not come into force till to-day.

ಶ್ರೀ ಕೆ. ಸಿದ್ದಯ್ಯ:- ಈಗಿರುವುದನ್ನು ತಾವು ಏತಕ್ಕೆ ಕಿತ್ತು ಹಾಕಬೇಕು?

ಶ್ರೀ ಎಂ. ವೀರಪ್ಪ ಮೊಯಿಲಿ:- ನಾನು ಹೇಳುವುದನ್ನು ತಾವು ಸಾವಧಾನದಿಂದ ಕೇಳಿದರೆ ಎಲ್ಲವೂ ಅರ್ಥವಾಗುತ್ತದೆ.

MR. SPEAKER:- When rules are framed, where in the question of....

SRI M. VEERAPPA MOILY:- No doubt the Act has been published and subsequent to the Act, an ordinance has been published. But the ordinance has given the power to the Government to prescribe the date of the commencement of the Act and ordinance. We are not giving effect to that. Government has not passed an order. When the Act has not come into force consequently ರೂಲ್ಸ್ ಫ್ರೇಂ ಮಾಡತಕ್ಕ ಪ್ರಶ್ನೆಯೇ ಇಲ್ಲ That is the clear position.

ಪ್ರೊ: ನಂಜುಂಡಸ್ವಾಮಿಯವರು ಅಧಿಕಾರ ಶಾಹಿಗಳ ಮತ್ತು ರೈತರರು ಒಂದು ಸಂಘರ್ಷಣೆ ಇದೆ ಎಂದು ಹೇಳುತ್ತಿದ್ದರು.

PROF. M.D. NANJUNDASWAMY:- That is why I welcome this.

SRI M. VEERAPPA MOILY:- That is why I appreciated you.

ನಾವು ಕಾನೂನು ಮಾಡಿ ಅಧಿಕಾರಿ ಶಾಹಿಗಳಿಗೆ ಇನ್ನೂ ಹೆಚ್ಚು ಶಕ್ತಿ ಕೊಡಬೇಕೆ ಅಥವಾ ಇದಕ್ಕೆ ನಾವು ಫ್ಲೆಕ್ಸಿಬಿಲಿಟಿ ಇಟ್ಟು ಅಧಿಕಾರ ಶಾಹಿಯನ್ನು ಸ್ವಲ್ಪ ಹತೋಟಿಯಲ್ಲಿಟ್ಟುಕೊಳ್ಳಲಿಕ್ಕೆ ಕಾನೂನು ಮಾಡಿಬಿಟ್ಟರೆ ಲಗಾಮಿನ ಸ್ವಲ್ಪ ಪಾಲನ್ನು ನಾವು ಅಧಿಕಾರ ಶಾಹಿಗಳಿಗೆ ಕೊಟ್ಟಂತಾಗುತ್ತದೆ. to make the Government more responsive than vesting more powers to the bureaucracy, and this is the idea.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರ ಬರಲಿಲ್ಲ. ನಾನು ಸ್ಪಷ್ಟವಾಗಿ ಕೇಳಿದ್ದು ಏನೆಂದರೆ ಪ್ರೊ: ನಂಜುಂಡಸ್ವಾಮಿಯವರು.....

ಅಧ್ಯಕ್ಷರು:- ಖಾರ್ಗೆಯವರೆ, ಈ ವಿಧೇಯಕದ ಬಗ್ಗೆ ಇನ್ನೂ ಹೆಚ್ಚಿನ ಚರ್ಚೆಯಾಗಬೇಕೆಂದು ಹೇಳುವುದಾದರೆ, I don't think you will be able to finish within half an hour.

SRI MALLIKARJUNA M. KHARGE:- Sir, it is a small matter.

MR. SPEAKER:- Is there any urgency?

SRI MALLIKARJUNA M. KHARGE:- No urgency.

SRI M. VEERAPPA MOILY:- I don't think there is much objection from the House. If the scope of the Act is understood, I don't think there will be much objection. This is a simple repealment Act.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ನಂಜುಂಡಸ್ವಾಮಿಯವರು ಕಾನ್‌ಸ್ಟಿಟ್ಯೂಷನ್‌ನಲ್ಲಿ ಮತ್ತು ಲಾ ನಲ್ಲಿ ಒಳ್ಳೆಯ ಪರಿಣತರಿದ್ದಾರೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನನಗೆ ತಿಳಿದ ಪ್ರಕಾರ ಆರ್ಟಿಕಲ್ 16 ಸಬ್‌ಸೆಕ್ಷನ್ (4)ರಲ್ಲಿ

"nothing in this Article shall prevent a State from making any provision for the reservation of appointments or posts in favour of any backward class citizens which in the opinion of the State is not adequately represented in the services under the State" ಎಂದಿದೆ.

This means, under Article 16(4) you can make any provision. Constitution has given a power to make provisions. So, that Act has been enacted. That is in the year 1978. ಇದರ ಪ್ರಕಾರ ರಿಸರ್ವೇಷನ್ ಸಿಕ್ಕದೆ, ಕಾನ್‌ಸ್ಟಿಟ್ಯೂಷನ್‌ನಲ್ಲಿ ಏಂದು ನಾವು ಆಕ್ಟ್ ಮಾಡದೆ, ರೂಲ್ಸ್ ಮಾಡದೇ ಹೋದರೆ ಅದನ್ನು ಇಂಪ್ಲಿಮೆಂಟ್ ಮಾಡುವುದು ಹೇಗೆ? ಇದಾದಮೇಲೆ ಆರ್ಟಿಕಲ್ 309ರ ಪ್ರಕಾರ ಪ್ರೊ: ನಂಜುಂಡಸ್ವಾಮಿಯವರು ಹೇಳಿದಂತೆ ಇದರ ಪ್ರಕಾರ ಕೂಡ

"subject to the provisions of this Constitution, Acts of the appropriate Legislature may regulate the recruitment and conditions of service of persons appointed to public service and posts in connection with the affairs of the Union or the State Government".

ಇದನ್ನು ಸಹ ಆಕ್ಟ್ ಮಾಡಬೇಕಾಗುತ್ತದೆ. ಈಗ ಮಾಡಿರುವುದನ್ನು ರಿಪೀಲ್ ಮಾಡಿದರೆ ಪುನಃ ಇದನ್ನು ರೆಗ್ಯುಲೇಟ್ ಮಾಡಲಿಕ್ಕೆ ಹೊಸ ಆಕ್ಟ್‌ನ್ನು ತರುತ್ತೀರಾ? ಇಂಥ ಗಹನವಾದ ಕೆಲವು ವಿಷಯಗಳಿವೆ. ಆದಕ್ಕಾಗಿ ಮುಂದಿನ ಅಧಿವೇಶನದಲ್ಲಿ ತಾವು ಇದನ್ನು ತೆಗೆದುಕೊಳ್ಳಿ. ಇಲ್ಲದಿದ್ದರೆ ಮತ್ತೆ ಇನ್ನು ಒಂದು ತಿಂಗಳ ನಂತರ ಹೇಗೂ ಅಧಿವೇಶನವನ್ನು ಕರೆಯುವುದಾಗಿ ಹೇಳುತ್ತಿದ್ದೀರಿ. ಆಗ ಇದನ್ನು ಇಟ್ಟುಕೊಳ್ಳಿ. ಇಲ್ಲಿ ಹೇಳಿರತಕ್ಕದ್ದು ನಮಗಂತೂ ಅರ್ಥವಾಗಿಲ್ಲ. I may be weak in understanding. ಇದು ಸರಿಯಾಗಿದೆಯೆಂದು ಎಲ್ಲರೂ ಹೇಳುವುದಾದರೆ ನಾನು ಸಹ ಇದನ್ನು ಒಪ್ಪಿಕೊಳ್ಳುತ್ತೇನೆ. 1978ರಲ್ಲಿ ಸಹ ಲಾ ಡಿಪಾರ್ಟ್‌ಮೆಂಟ್‌ನವರು ಒಪೀನಿಯನ್ ಕೊಟ್ಟಿದ್ದು; ಆಗ ಡಿ.ಪಿ.ಎ.ಆರ್.ನವರೂ ಒಪ್ಪಿಕೊಂಡಿದ್ದರು, ಆಗಲೂ ಈ ಸದನದಲ್ಲಿ ನಾವೆಲ್ಲರೂ ಚರ್ಚೆ ಮಾಡಿ ಒಪ್ಪಿಕೊಂಡಿದ್ದೇವೆ. ಆದರಲ್ಲಿ ಏನಾದರೂ ಡಿಫೆಕ್ಟ್ ಇದ್ದರೆ ಹೇಳಿ. ಇದನ್ನು ರಿಪೀಲ್ ಮಾಡುವುದರಿಂದ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ, ಪರಿಶಿಷ್ಟ ವರ್ಗದವರಿಗೆ ನಾವು ನೇರವಾಗಿ ರಿಸರ್ವೇಷನ್ ಮಾಡಬಹುದೆಂದು ತಾವು ಹೇಳುವುದಾದರೆ ಆಗಬಹುದು. ನೀವು ಬರೇ ಎಕ್ಸಿಕ್ಯುಟೀವ್ ಆರ್ಡರ್ ಮಾಡಿದರೆ ನಾಳೆ ಯಾರಾದರು ಬಂದು ಅದು ಎಕ್ಸಿಕ್ಯುಟೀವ್ ಆರ್ಡರ್ ಏನ್ನು ವಿತ್‌ಡ್ರಾ ಮಾಡಿಕೊಂಡುಬಿಟ್ಟರೆ ಆ ಇಲಾಖೆಯ ಕತೆ ಮುಗಿಯಿತು. ಈ ಆಕ್ಟ್ ಇದ್ದರೆ ಏನಾಗುತ್ತದೆಂದರೆ ಎನ್‌ಫೋರ್ಸ್‌ಮೆಂಟ್ ಇರುತ್ತದೆ. ಅದಕ್ಕೆ ಹೇಳುವುದಕ್ಕೆ ಹಕ್ಕು ಇರುತ್ತದೆ. ನಾಳೆ ಇದಕ್ಕೆ ನಾವು ಏನಾದರು ಅಮೆಂಡ್‌ಮೆಂಟ್ ಮಾಡಬೇಕಾದರೆ ಪುನಃ ಈ ಸದನದಲ್ಲಿ ತರಬೇಕಾಗುತ್ತದೆ. ಎಕ್ಸಿಕ್ಯುಟೀವ್ ಆರ್ಡರ್ ತರಬೇಕಾಗಿಲ್ಲ. ಸುಮ್ಮನೆ ಅವರು ಇಷ್ಟೂ ಮಾಡುತ್ತಾರೆ. ಆಮೇಲೆ that will be placed on the Table of the House for reference ಈಗ ತಾವು ಏನು ಹೇಳಿದಿರಿ ಅಂದರೆ, for reservation and other things ನಮ್ಮ ಇಂಡಿಯನ್

ಕಾನ್‌ಸ್ಟಿಟ್ಯೂಷನ್‌ನಲ್ಲಿ ಪ್ರಾವಿಷನ್ ಇದ್ದಮೇಲೆ, ಬರೀ ಒಂದು ಎಕ್ಸಿಕ್ಯುಟೀವ್ ಆರ್ಡರ್‌ನ್ನು ಇಷ್ಯೂ ಮಾಡಿದರೂ ಕೂಡ we can protect their interest ಅನ್ನತಕ್ಕಂಥ ಮಾತನ್ನು ತಾವು ಹೇಳಿದಿರಿ. ಅದಕ್ಕೆ ಆರ್ಡರ್ ಇಷ್ಯೂ ಮಾಡಿದರೆ ಏನಾಗುತ್ತದೆಂದರೆ, ನೀವು ಇರುವ ತನಕ ಆದು ಇರಬಹುದು. ಇನ್ನೊಬ್ಬರು ಇರುವ ತನಕ ಇರಬಹುದು. ನಾಳೆ ಮತ್ತೊಬ್ಬರು ಯಾರಾದರು ಬಂದು ಇದು ಸರಿಯಿಲ್ಲ ತೆಗೆದುಹಾಕಿ ಎಂದರೆ ಏನು ಮಾಡುವುದು? ಅದಕ್ಕೆ ಈ ಕಾನೂನು ಈಗಾಗಲೇ ಏನು ನಾವು ತಂದಿದ್ದೇವೆ, ಅದು ಯಾವ ಉದ್ದೇಶಕ್ಕಾಗಿ ತಂದಿದ್ದರು ಅದರಲ್ಲಿ ಡಿಫೆಕ್ಟ್ ಇದ್ದರೆ ಅದರಲ್ಲಿ ಏನು ಡಿಫೆಕ್ಟ್ ಇದೆ ಎಂಬುದನ್ನು ಎಲ್ಲರಿಗೂ ಹೇಳಿಕೊಟ್ಟಮೇಲೆ, ಮತ್ತು ಎಲ್ಲರಿಗೂ ಸಮಾಧಾನ ಮಾಡಿ, ಮತ್ತು ಇದು ಒಳ್ಳೆಯದಿದೆ ಎಂದು ಹೇಳಿ ನಮ್ಮ ಮನ ಒಲಿಸಿಕೊಟ್ಟರೆ ನಾವು ಒಪ್ಪಿಗೆ ಕೊಡುತ್ತೇವೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಇದರಿಂದ ತೊಂದರೆಯಾಗುತ್ತದೆಂದರೆ ನಿಮಗೂ ನಮಗೂ ಜನರು ನಾಳೆ ಕೇಳುತ್ತಾರೆ. ಇದರಲ್ಲಿ ಯಾರಿಗೂ ಪ್ರತಿಷ್ಠೆ ಪ್ರಶ್ನೆ ಇಲ್ಲ. ಎಲ್ಲರ ಪ್ರಶ್ನೆ ಇದೆ.

ಶ್ರೀ ಎ.ಬಿ. ಜಕನ್ನೂರ್:- ಇದರ ಕಾಪೀಸ್ ನಮಗೆ ಬಂದಿಲ್ಲ. ಬರೀ ರಿಪಿಲ್‌ದ್ದು ಬಂದಿದೆ. Original Act is not supplied. It is not brought into force. Why repealing it. ಮುಂದಿನ ಸೆಷನ್‌ಗೆ ಮಾಡೋಣ. ಗಡಿಬಿಡಿ ಏನಿದೆ?

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಸುಮಾರು ಒಂದು ತಿಂಗಳ ಕಾಲ ಬಜೆಟ್ ಮೇಲೆ ಮಾತನಾಡಿದ್ದೇವೆ. ಪಾಸ್ ಮಾಡಿದ್ದೇವೆ. ಇವತ್ತು ನಮಗೆ ಮುಖ್ಯವಾದಂಥ ಕೆಲಸ ಎಂದರೆ ಈ ಸದನದಲ್ಲಿ ನಾವು ಶಾಸಕರಾಗಿ ಶಾಸನಗಳನ್ನು ತರುವುದು, ತಿದ್ದುಪಡಿ ಮಾಡುವುದು, ಬದಲಿ ಮಾಡುವುದು. ಅಂದ ಮೇಲೆ ಇಷ್ಟು ಬೇಗ ನಾವು ಒಂದು ಕಾನೂನನ್ನು ತೆಗೆದುಹಾಕುವುದು ಆಗಲಿ, ಮತ್ತೊಂದು ಕಾನೂನನ್ನು ತಿದ್ದುಪಡಿ ಮಾಡುವುದಾಗಲಿ ಆಷ್ಟು ಸರಿಯಲ್ಲ; ಶಾಸಕರಾದವರು ಇರತಕ್ಕಂಥ ಶಾಸನವನ್ನು ಕಾನೂನನ್ನು ಪೂರ್ಣವಾಗಿ ತಿಳಿದುಕೊಂಡು ಬದಲಾವಣೆಯಿಂದ ಆಗತಕ್ಕಂಥ ಪರಿಣಾಮಗಳನ್ನು ತಿಳಿದುಕೊಂಡು ನಿಜವಾದ ನಮ್ಮ ಶಾಸಕರ ಪಕ್ಷನ್ನು ಭಲಾಯಿಸುವುದಕ್ಕೆ ಅವಕಾಶವಿರಬೇಕು. ಆದ್ದರಿಂದ ದಯವಿಟ್ಟು ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ. ಎಂ. ವೀರಪ್ಪ ಮೊಯಿಲಿ:- ಅಧ್ಯಕ್ಷರೇ, ಇದಕ್ಕೆ ಕೆಲವು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಈ ಮಸೂದೆಯನ್ನು ತರುವುದರಲ್ಲಿ ಆತುರವೇನಿಲ್ಲ. ಎರಡನೆಯ ವಿಚಾರವೆಂದರೆ ಈ ಮಸೂದೆ ಸದನದಲ್ಲಿ ಇವತ್ತೇನು ತರೆದು ನಾವು ಪಾಸ್ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಇದು ಈ ಸದನದಲ್ಲಿ 10-15 ದಿವಸದಿಂದ ಇದೆ. We are not bringing it all of a sudden for getting it passed. It has been there in this House since more than 15-20 days. There are two things. The inspiration or source of inspiration for the rules which are framed which are in force is Article 309 itself. We derive inspiration from the direct substantive Article 309. ಈಗ ಮತ್ತೊಂದು ಪ್ರಶ್ನೆ ಎಂದರೆ ಈಗ ಇರುವ ಆಕ್ಟ್ ಪ್ರಕಾರ ಕೂಡ ಇಷ್ಟೇ ಪರ್ಸೆಂಟೇಜ್ ರಿಸರ್ವೇಷನ್ ಇಡಬೇಕೆಂದೇನೂ ಇಲ್ಲ; it is the rules under the Act which enable us and give power; ಅದರ ಬದಲು ರಾಜ್ಯಾಂಗದ ಮುಖಾಂತರ ಕಾನೂನು ಮಾಡಿ ಕಾನೂನನ್ನು ರೆಗ್ಯುಲೇಷನ್ ಮಾಡಿ, ಅದನ್ನು ಜಾರಿಗೆ ಕೊಟ್ಟರೆ ಅದರಿಂದ ಈ ಪಕ್ಕಿನ ಒಂದು ವ್ಯಾಪ್ತಿಯಲ್ಲಿ ಸ್ವಲ್ಪ ಶಿಥಿಲತೆ ಆಗುತ್ತದೆಂಬುದನ್ನು ತಾವು ಆಲೋಚನೆ ಮಾಡಬೇಕು. ಇದರ ಬಗ್ಗೆ ಬೇಕಾದರೆ ವ್ಯಾಪಕವಾದ ಅಧ್ಯಯನ ಮಾಡಿ Government is not in a hurry to bring it. We will discuss. ಆದ್ದರಿಂದ ಒಂದು ವಿಚಾರವನ್ನು ನಾನು ಸ್ಪಷ್ಟೀಕರಣ ಪಡಿಸುವುದಕ್ಕೆ ಇಚ್ಛಿಪಡುತ್ತೇನೆ, ಏತಕ್ಕೆಂದರೆ ಕಳೆದ 10-15 ದಿವಸಗಳಿಂದ it is before this House. Government is not anxious just to get it passed. ನಮ್ಮ ಅನುಭವ ಏನು ಹೇಳುತ್ತದೆಂದರೆ, we are in a position to protect the

interest of Scheduled Castes/Sheduled Tribes, Backward Classes with the direct source of Article 309 instead of enacting an Act under 309. ಅದಕ್ಕಿಂತ ಹೆಚ್ಚಾಗಿ ಇದರಲ್ಲಿ ಅಧಿಕಾರ ಶಾಹಿಯನ್ನು ಬೆಳಸಲಿಕ್ಕೆ ಅವಕಾಶ ಇಲ್ಲ. ಎಲ್ಲಾ ಹಕ್ಕುಗಳನ್ನು ನಮಗೆ ಸಂವಿಧಾನ ಕೊಡುತ್ತದೆ. ಸಂವಿಧಾನ ಕೊಡತಕ್ಕ ಹಕ್ಕಿನ ಸಂಪೂರ್ಣ ಪ್ರಭಾವ ಮಸೂದೆಯಲ್ಲಿ ಬರುತ್ತದೆಂದು ಗ್ಯಾರಂಟಿ ಇಲ್ಲ. ಇದನ್ನು ಪ್ರೊ: ನಂಜುಂಡಸ್ವಾಮಿಯವರು ಒಪ್ಪುತ್ತಾರೆಂದು ಭಾವನೆ. He would agree with me that some times it will get diluted. To that extent, your Act may be disabled or Government may be disabled from acting. Ultimately, it is the wisdom of the legislature that prevails.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಇದರಲ್ಲಿ ಆ ಶಕ್ತಿ ಇಲ್ಲವೆಂದು ಹೇಳಬೇಕು. ಇಂಥ ಸೆಕ್ಷನ್‌ನಲ್ಲಿ ಇಲ್ಲವೆಂದು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಇಲ್ಲಿ ಆಕ್ಟಿನ ಪ್ರಶ್ನೆ ಇಲ್ಲ. As it is, a particular regulation or rules of Government can derive the strength directly from the Constitution. We feel that is much better than deriving a strength by enacting an Act under the provision of the Constitution. This is the philosophy. ಇದನ್ನು ವಿಚಾರ ಮಾಡೋಣ. ಅದಕ್ಕೇನು ಅವಸರ ಇಲ್ಲ. ರಿಸರ್ವೇಷನ್ ರೂಲ್ಸ್ ಮಾಡತಕ್ಕದ್ದು under Aricle 309.

MR. SPEAKER:- We will take it up next time.

SRI KAGODU THIMMAPPA:- The Hon.Law Minister has convinced us. He explained the position of Article 309.

ಅಧ್ಯಕ್ಷರು:- ಅದನ್ನು ನೀವು ಯೋಚನೆ ಮಾಡಿ. It will come up again. We are not dispossing off. We will take up the matter next time.

ನಿಯಮ 68ರ ಮೇಲಿನ ಚರ್ಚೆ.

ಅಧ್ಯಕ್ಷರು:- 68ನೇ ವಿಧಿನಿಯಮದ ಕೆಳಗೆ ಚರ್ಚೆ ಆಗಬೇಕೆಂಬ ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದೆ. ಆದುದರಿಂದ ಈಗ ಕೈಗೆತ್ತಿಕೊಂಡಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ:- ಮಾನ್ಯ ಸಭಾಪತಿಯವರು ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ಬಹುಶಃ ತಮಗೂ ಆಹ್ವಾನ ಬಂದಿರಬೇಕು. ಆ ಕೂಟಕ್ಕೆ ಹೋಗದೆ ಇದ್ದರೆ ಅಸೌಜನ್ಯವಾಗುತ್ತದೆ. ಅದಕ್ಕೋಸ್ಕರ ಒಂದು ಗಂಟೆ ಕಾಲ ಸಭೆಯನ್ನು ಅಡ್ಜರ್ನ್ ಮಾಡಿದರೆ ಒಳ್ಳೆಯದು.

ಶ್ರೀ ಟಿ.ಎನ್. ನರಸಿಂಹ ಮೂರ್ತಿ:- ನನಗೆ ಮೇಲ್ಮನೆಯಲ್ಲಿ ಕೆಲಸ ಇದೆ, ಆದ್ದರಿಂದ ಬೇಗ ಮುಗಿಸಿದರೆ ಒಳ್ಳೆಯದು.

ಅಧ್ಯಕ್ಷರು:- ಶುರು ಮಾಡಿ, ಅರ್ಧ ಗಂಟೆಯಲ್ಲಿ ಮುಗಿಯುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಭೋಜನ ಕೂಟಕ್ಕೆ ಹೋಗದೆ ಇದ್ದರೆ ಅಸೌಜನ್ಯವಾಗುತ್ತದೆಂದು ಅಷ್ಟೆ.

SRI T.N. NARASIMHA MURTHY:- I have to attend the Legislative Council. I leave it to the Hon.Speaker. If the Hon.Leader of the Opposition wants time, I have no objection.

ಮಾನ್ಯ ವಿರೋಧ ಪಕ್ಷದ ನಾಯಕರು ಸಲಹೆ ಮಾಡಿರುವುದರಿಂದ ನನ್ನದೇನು ಆಕ್ಷೇಪಣೆ ಇಲ್ಲ.